ಇಲ್ಲಿ ಮಾರಿಸ್‌ನ ಭೇಟಿ ಮಾಡುವ ಎಲ್ಲ ಸಂಭವವಿದ್ದರೂ ಆತನನ್ನು ಈ ರೂಪದಲ್ಲಿ ನೋಡಿದಾಗ ಆಶ್ಚರ್ಯವಾಗಿತ್ತು. ಇಂದು ನಾನು ನೋಡಿದ್ದರಲ್ಲಿ ಒಂದೇ ಒಂದು ವ್ಯತ್ಯಾಸವೆಂದರೆ ಆತ ಜೀನ್ಸ್ ಹಾಕಿದ್ದ. ಮೇಲೆ ಮಾಮೂಲಿ ಸಣ್ಣ ಸಣ್ಣ ಚುಕ್ಕಿಯ ಕೊಂಚ ದೊಗಲೆ ಅಂಗಿ. ಒಳಗೆ ಒಂದು ಟರ್ಟಲ್ ನೆಕ್ಕು. ಮಾಮೂಲಿನಂತೆ ಮಾರಿಸನ ದೇಹಾವಲೋಕನ ನಡೆದಿದ್ದರೂ ಮುಖಕ್ಕೆ ಆತ ಇಷ್ಟು ದಟ್ಟವಾಗಿ ಮೇಕಪ್ ಮಾಡಿದ್ದು ಹಿಂದೆಂದೂ ನೋಡಿರಲಿಲ್ಲ. ಆದ್ದರಿಂದ ಈತ ಯಾವ ದಿಕ್ಕಿನಲ್ಲಿ ನಡೆದಿದ್ದಾನೆ ಎಂಬುದರ ಬಗ್ಗೆ ನನಗೆ ಯಾವ ಅನುಮಾನವೂ ಉಳಿದಿರಬಾರದೆಂದುಕೊಂಡೆ.

ಆದರೆ ಕೊಂಚ ಎಡವಟ್ಟಾದದ್ದು ಅಂದು ಮಧ್ಯಾಹ್ನದ ಲಂಚ್‌ಬ್ರೇಕಲ್ಲಿ. ಊಟಕ್ಕೆ ಮುಂಚೆ ಎಲ್ಲರೂ ರೆಸ್ಟ್‌ರೂಮಿಗೆ ಹೋದಾಗ ಈತ ಸೀದಾ ನನ್ನ ಜತೆಯೇ ಗಂಡಸರ ಬಾತ್‌ರೂಮಿಗೇ ಬಂದ. ಮೊದಲಿಂದಲೂ ಈತನದು ಮುಖಕ್ಕೆ ಮುಖ ಕೊಟ್ಟು ಮಾತಾಡುವ ಅಭ್ಯಾಸ. ಕಿಕ್ಕಿರಿದಿದ್ದ ಹೋಟೆಲ್ ಬಾತ್‌ರೂಮಿನಲ್ಲಿ ಆತ ಒಂದೇ ಸಮನೆ ಮಾತಾಡುತ್ತಲೇ ಇದ್ದ. 'ಸೂರಿ, ನಮ್ಮದು ಕಂಪೆನಿ ಬದಲಾಗುತ್ತಂತೆ. ನಮ್ಮ ಈ ಎಲ್ಲ ಆಸ್ಪತ್ರೆಗಳನ್ನೂ ವೆಸ್ಟ್‌ಹೆಲ್ತ್‌ನವರು ಕೊಂಡುಕೊಳ್ಳುತ್ತಿದ್ದಾರಂತೆ.' ಎಂದು ಬಾತ್‌ರೂಮಿನ ಹೊರಗೇ ಮಾತಾಡಲು ಆರಂಭಿಸಿದ್ದ ಆತನನ್ನು ಬಾತ್‌ರೂಮ್ ಕೆಲಸ ಮುಗಿಸಿ ನಂತರ ಊಟ ಮಾಡುತ್ತಾ ಆರಾಮಾಗಿ ಮಾತಾಡೋಣ ಎಂದು ನಾನು ತಡೆಯಲು ಪ್ರಯತ್ನ ಪಟ್ಟಿದ್ದೆ. ಆದರೆ ಆತ ಮಾತಾಡುತ್ತಲೇ ಇದ್ದ. 'ಹೊಸಾ ಕಂಪೆನಿಯವರ ಆಫರ್ ನೋಡಿದೆ. ಅವರ ಬೆನಿಫಿಟ್ ಪ್ಯಾಕೇಜು ಚೆನ್ನಾಗಿದೆ. ಹೆಲ್ತ್, ಮಾಲ್‌ಪ್ರಾಕ್ಟೀಸು, ಡಿಸಬಿಲಿಟಿ, ಜೀವವಿಮೆ ಈಗಿನ ಕಂಪೆನಿಯವರಿಗಿಂತ ಚೆನ್ನಾಗಿಯೇ ಇದೆ. ಇನ್ನೊಂದು ವಿಷಯ ಗೊತ್ತಾ, ಹೊಸಾ ಆರೋಗ್ಯವಿಮೆ ಟ್ರಾನ್ಸ್ ಸರ್ಜರಿಯನ್ನು ಕೂಡ ಕವರ್ ಮಾಡುತ್ತಂತೆ' ಎಂದು ಕಿವಿಯಲ್ಲಿ ಗುಟ್ಟಾಗಿ ಬಂದು ಹೇಳಿದ. ನನ್ನ ಕಿವಿಯ ಹಿಂದೆ ಆತನ ತುಟಿ ತಗುಲಿದಂತಾಗಿ ನಾನು ಪಕ್ಕನೆ ಬಲಕ್ಕೆ ತಿರುಗಿದೆ. ನಾನು ತಿರುಗಿದ ರಭಸಕ್ಕೆ ಆತನ ತುಟಿ ನನ್ನ ಕೆನ್ನೆಗೊತ್ತಿತ್ತು. ಆತ, 'ಓ ಸೂರಿ, ಯು ಲುಕ್ ಕ್ಯೂಟ್' ಎಂದು ತನ್ನ ಬೆರಳಿನಿಂದ ನನ್ನ ಕೆನ್ನೆಗೆ ಹತ್ತಿದ್ದ ಆತನ ಲಿಪ್‌ಸ್ಟಿಕ್ಕನ್ನು ಒರೆಸತೊಡಗಿದ. ನಾನು ಆತನ ಕೈಯನ್ನು ಕೊಂಚ ಬಲವಾಗಿ ದೂಡಿ ಸಿಂಕಿನ ಬಳಿ ಹೋಗಲು ನೋಡಿದೆ. ಆದರೆ, ಅಲ್ಲಿ ಕಿಕ್ಕಿರಿದಿದ್ದ ಜನಜಂಗುಳಿಯಲ್ಲಿ ನನಗೆ ಸಿಂಕಿನ ಹತ್ತಿರ ಹೋಗಲು ಸಾಧ್ಯವಾಗಲೇ ಇಲ್ಲ.

ಹಾಗೆಯೇ ಕೆನ್ನೆಯುಜ್ಜುತ್ತಾ ಇದ್ದಾಗ ಇನ್ನೂ ಕೆನ್ನೆಯೆಲ್ಲ ಕೆಂಪಾಗಿ ರಬಡಿಯಾಗಿಹೋಯಿತು. ಯಾರೋ ಉಚ್ಚೆ ಹೊಯ್ದು ಜಿಪ್ ಹಾಕಿಕೊಂಡು ಹೊರಗೆ ಹೋಗುತ್ತಿದ್ದವ ನಮ್ಮಿಬ್ಬರನ್ನೂ ನೋಡಿ, 'ಯು ಲೇಡೀಸ್ ಶುಡ್ ಗೆಟ್ ಅ ರೂಮ್' ಎಂದ. ನಂತರ ಮಾರಿಸ್‌ನನ್ನು ಕೆಕ್ಕರಿಸಿ ನೋಡಿದವನೇ, 'ನೀನು ಇಲ್ಲಿ ಉಚ್ಚೆ ಹೊಯ್ಯಬೇಕಾದರೆ ಯು ನೀಡ್ ಟು ಗ್ರೋ ಅ ಪೇರ್ ಆಫ್ ನಟ್ಸ್. ಇದು ನಮ್ಮ ರಾಜ್ಯದ ಕಾನೂನು' ಎಂದು ದುರುಗುಟ್ಟಿಕೊಂಡು ನಿಂತ. ಉತ್ತರ ಕೆರೊಲಿನಾದಲ್ಲಿ ಟ್ರಾನ್ಸ್‌ಜೆಂಡರ್ ಜನರು ಅವರು ಗುರುತಿಸಿಕೊಳ್ಳುವ ಲಿಂಗದ ಬಾತ್‌ರೂಮಿಗೆ ಹೋಗಬೇಕೆಂಬ ಕಾನೂನಿನ ಬಗ್ಗೆ ವಾದವಿವಾದಗಳು ನಡೆದಿದ್ದವು. 'ಆದರೆ, ಆದರೆ' ಎಂದು ಮಾರಿಸ್ ತನ್ನ ಕೀರಲು ಧ್ವನಿಯಲ್ಲಿ ಕೂಗಲು ತೊಡಗಿದ್ದ. ಅಷ್ಟರಲ್ಲಿ ಎರಡು ಯುರಿನಲ್ಲುಗಳು ಖಾಲಿಯಾದಾಗ ಏನು ಮಾಡಲಿಕ್ಕೆ ತೋಚದೇ ನಾವಿಬ್ಬರೂ ಅಕ್ಕಪಕ್ಕದಲ್ಲಿಯೇ ನಿಂತು ಉಚ್ಚೆ ಹೊಯ್ಯತೊಡಗಿದೆವು. 'ಯು ಡು ಹ್ಯಾವ್ ಅ ಡಿಕ್. ನಮ್ಮ ಪುಣ್ಯ, ನಿಂತುಕೊಂಡು ಹೋಗೋಕೆ ಬರುತ್ತಾ? ಆ ಕಡೆ ಈ ಕಡೆ